# ಪುಟ್ಟ ಬಳೆಯ ಮಲ್ಹಾರ

ಪುಟ್ಟ ಬಾಲೆಯರಿಂದ ಹಿಡಿದು ವಯೋವೃದ್ಧರವರೆಗೂ ಬಳೆಗಳೆಂದರೆ ಅಚ್ಚುಮೆಚ್ಚು. ಜಾತ್ರೆ, ಉತ್ಸವ, ಹಬ್ಬ ಹರಿದಿನಗಳು ಮತ್ತು ವಿಶೇಷ ದಿನಗಳಲ್ಲಿ ಬಳೆಗಳು ಜಗಮಗಿಸುತ್ತವೆ. ಬಗೆಬಗೆಯ ಬಳೆಗಳು ಮಾರುಕಟ್ಟೆಯಲ್ಲಿ ಸಿಗುತ್ತವೆ. ಆದರೆ ಇಲ್ಲಿ ಪುಟ್ಟ ಪುಟ್ಟ ಉಂಗುರದ ಸೈಜಿನ ಬಳೆಗಳು ಕಾಣಸಿಗುತ್ತವೆ. ಈ ಬಳೆಗಳನ್ನು ಎಳೆಯ ಮಕ್ಕಳಿಗೂ ಹಾಕಲು ಆಗುವುದಿಲ್ಲ. ಈ ಪುಟಾಣಿ ಬಳೆಗಳು ಕಾಣಸಿಗುವುದು ತುಮಕೂರು ಜಿಲ್ಲೆಯ ಗೊರವನಹಳ್ಳಿ ಮಹಾಲಕ್ಷ್ಮೀ ದೇವಸ್ಥಾನದಲ್ಲಿ. ಮಹಾಲಕ್ಷ್ಮೀ ದೇವಸ್ಥಾನಕ್ಕೆ ಬರುವ ಭಕ್ತಾದಿಗಳು ಈ ಪುಟಾಣಿ ಬಳೆಗಳನ್ನು ಪೂಜೆಗೆಂದು ಒಯ್ಯುತ್ತಾರೆ.

**-ಪಲ್ಲವಿ ಡಿ. ಡೊಳ್ಳಿನ, ಕೊಪ್ಪಳ**





# ಮುತ್ತಲ್ಲಿ ಮಿನುಗುವ ಚಿತ್ತಾರ

ಬೀದರ್ ನಗರದಲ್ಲಿರುವ ರಂಗೀನ್ ಮಹಲ್‌ನಲ್ಲಿರುವ ಈ ಬಾಗಿಲು ನೋಡಲು ಬಲು ಆಕರ್ಷಕ. ಈ ದ್ವಾರಗಳ ಕೆತ್ತನೆಯು ಇಂಡೋ ಇಸ್ಲಾಮಿಕ ಶೈಲಿಯಲ್ಲಿದ್ದು ಮುಖ್ಯದ್ವಾರವನ್ನು ಅಮೃತ ಶಿಲೆಯಲ್ಲಿ ನಿರ್ಮಿಸಲಾಗಿದೆ. ದ್ವಾರದ ಚೌಕಟ್ಟಿನ ಮೇಲೆ ಚಿತ್ತಾರಗಳನ್ನು ಕೆತ್ತಲಾಗಿದೆ. ದೇಶ– ವಿದೇಶಗಳಿಂದ ತರಿಸಿದ ಬಣ್ಣದ ಮುತ್ತುಗಳನ್ನು ಕರಗಿಸಿ ಕೆತ್ತನೆಯಲ್ಲಿ ತುಂಬಲಾಗಿದೆ. ಈ ಚಿತ್ತಾರಗಳು ಇಂದಿಗೂ ಹೊಳೆಯುತ್ತಿವೆ. ಆದರೆ ಬೆಲೆಬಾಳುವ ಮುತ್ತುಗಳ ಆಸೆಯಿಂದ ಕಲೆಯನ್ನು ವಿರೂಪಗೊಳಿಸುವ ಕೆಲಸಕ್ಕೆ ಕಿಡಿಗೇಡಿಗಳು ಯತ್ನಿಸಿರುವುದು ಕಂಡ ಬರುತ್ತದೆ. ಇಂತಹ ಅಪರೂಪದ ಕಲೆ ಕಿಡಿಗೇಡಿಗಳಿಂದಾಗಿ ಹಾಳಾಗುತ್ತಿದೆ.

**-ಶ್ರೀದೇವಿ ಮಾಲಿಪಾಟೀಲ್, ಕಲಬುರಗಿ**

# ಚೋಟುದ್ದ ಮಿಡತೆಗೆ ಮಾರುದ್ದ ಮೀಸೆ

ಕೀಟಗಳಿಗೂ ಕುಡಿ ಮೀಸೆ ಇರುವುದು ಸಾಮಾನ್ಯ. ಆದರೆ ಈ ಚಿತ್ರದಲ್ಲಿ ಇರುವ ಮಿಡತೆಯ ಕುಡಿ ಮೀಸೆ 10 ಸೆಂ.ಮೀ ನಷ್ಟು ಇದ್ದು ಮೀಸೆ ಮಾವನಂತೆ ನೋಡುಗರನ್ನು ತನ್ನತ್ತ ಸೆಳೆಯುವಂತೆ ಮಾಡಿದೆ. ಪುತ್ತೂರು ತಾಲೂಕಿನ ಕುಮಾರ್ ಪೆರ್ನಾಜೆ ಅವರ ಮನೆಯಲ್ಲಿ ಕಂಡು ಬಂದ ಸೋಜಿಗ ಕ್ಯಾಮೆರಾದಲ್ಲಿ ಸೆರೆಯಾಗಿ ಪ್ರಕೃತಿಯತ್ತ ತನ್ನ ಬಾಳ ಪಯಣ ಮುಂದುವರಿಸಿತು.

**ಚಿತ್ರ- ಬರಹ: ನಂದನ್‌ಕುಮಾರ್ ಪೆರ್ನಾಜೆ, ಪುತ್ತೂರು**

